

ಮುಗಿಸಿಕೊಂಡೆ. ಆದರೆ ಅಧಿವೇಶನದ ವೇಳೆಗೆ ಸರಿಯಾಗಿ ಮಲೇರಿಯ ಜ್ವರತಪ್ತನಾಗಿ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಲು ಅಸಮರ್ಥನಾದೆ.

ಬೆಳಗಾಂವಿಯಲ್ಲಿ ಮಹಾರಾಷ್ಟ್ರಾಭಿಮಾನಿಗಳ ತಂಡಕ್ಕೆ ದೇಶಪಾಂಡೆ ಗಂಗಾಧರರಾಯರು ನಾಯಕರಾಗಿದ್ದಂತೆ, ಕನ್ನಡಿಗರ ತಂಡಕ್ಕೆ ಮುದವೀಡು ಕೃಷ್ಣರಾಯರು ನಾಯಕರಾಗಿದ್ದರು. ಡಾ. ಸವಣೂರ್, ಗೆಜ್ಜೆ ಕೃಷ್ಣರಾಯರು, ಕೇಶವರಾವ್ ಗೋಖಲೆ, ಬೆಳವಿ ಮಧ್ವತಶಯರು, ಅಡ್ಡಣಗಿ ಮೊದಲಾದವರು ಕೃಷ್ಣರಾಯರನ್ನು ಸಮರ್ಥಿಸುತ್ತಿದ್ದರು.

ಎಲ್ಲ ಕಾಂಗ್ರೆಸ್‌ಗಳಂತೆ ಬೆಳಗಾಂವಿ ಕಾಂಗ್ರೆಸ್ಸೂ ಆಗಿ ಕೆಲವು ನಿರ್ಣಯಗಳನ್ನು ಮಾಡಿ ಚದುರದೆ ಕರ್ನಾಟಕದ ಸಾಂಸ್ಕೃತಿಕ ಅಧಿವೇಶನವಾಗಬೇಕೆಂಬುದು ಕೃಷ್ಣರಾಯರ ಉತ್ಕಟಾಕಾಂಕ್ಷೆಯಾಗಿತ್ತು. ರಾಯರು ಮಿತ್ರರೊಂದಿಗೆ ಸಮಾಲೋಚನೆ ಮಾಡಿ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಒಂದು ಸಂಗೀತ ಸಮ್ಮೇಳನ ಕೂಡಿಸಲು ನಿರ್ಧರಿಸಿದರು.

ಪೂರ್ವಸಿದ್ಧತೆ ಮಾಡಲು ರಾಯರು ಮೈಸೂರಿಗೆ ಬಂದರು. ಅವರೊಂದಿಗೆ ಓಡಿಯಾಡಿ ಈ ಕೆಲಸದಲ್ಲಿ ನೆರವಾಗಲು ನನಗೆ ಅವಕಾಶ ಸಿಕ್ಕಿತು. ರಾಯರ ಸಮೀಪವರ್ತಿಯಾಗಿದ್ದ ನನಗೆ ಅವರ ಉಜ್ವಲ ಕನ್ನಡಾಭಿಮಾನ ಆದರ್ಶವೇ ಆಯಿತು. ದೇಶಪಾಂಡೆ ಗಂಗಾಧರರಾಯರ ಮತ್ತು ಅವರ ಮಹಾರಾಷ್ಟ್ರ ಅಭಿಮಾನಿಗಳ ಪ್ರಭಾವ ಅಡಗಿಸಲು